265 (785) – ಶ್ರೀ ಶಿವಶಂಕರ್‌ರೆಡ್ಡಿ ಎನ್.ಹೆಚ್. (ಗೌರಿಬಿದನೂರು) – ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೌರಿಬಿದನೂರು ತಾಲ್ಲೂಕಿನಲ್ಲಿ ಎಷ್ಟು ಹೆಕ್ಟೇರ್ ಪ್ರಮಾಣದಲ್ಲಿ ರೇಷ್ಮೆ ಬೆಳೆಯನ್ನು ಬೆಳೆಯಲಾಗುತ್ತಿದೆ ;

ಆ) ಈ ರೇಷ್ಮೆ ಬೆಳೆಗೆ ಬೆಂಬಲ ಬೆಲೆಯು ಇಲ್ಲದೇ ಬಡ ರೇಷ್ಮೆ ಬೆಳೆಯುವ ರೈತಾಪಿ ವರ್ಗದವರು ಕಂಗಾಲಾಗಿ ನಷ್ಟವನ್ನು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ರೇಷ್ಮೆ ಬೆಳೆಯನ್ನು ಅಧಿಕ ಪ್ರಮಾಣದಲ್ಲಿ ಬೆಳೆಯಲು ಸರ್ಕಾರವು ರೂಪಿಸಿರುವ ಯೋಜನೆಗಳೇನು;

ಈ) 2006ನೇ ಸಾಲಿನಲ್ಲಿ ರೇಷ್ಮೆ ಬೆಳೆಯಿಂದ ಸರ್ಕಾರಕ್ಕೆ ಬಂದಿರುವ ಲಾಭವೆಷ್ಟು ಹಾಗೂ ಪ್ರತಿ ಗೂಡಿಗೆ ಸರ್ಕಾರವು ನೀಡುತ್ತಿರುವ ಬೆಂಬಲ ಬೆಲೆ ಎಷ್ಟು ;

ಉ) ಸಂಕಷ್ಟದಲ್ಲಿರುವ ರೇಷ್ಮೆ ಬೆಳೆಯನ್ನು ಉತ್ತಮಪಡಿಸಲು ಸರ್ಕಾರವು ಕೈಗೊಂಡಿರುವ ನಿರ್ಧಾರವೇನು ?

ಶ್ರೀ ಎಸ್. ಶಿವಣ್ಣ (ರೇಷ್ಮೆ ಸಚಿವರು)–

ಅ) 2456 ಹೆಕ್ಟೇರು

ಆ) ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ಬಹಿರಂಗ ಹರಾಜಿನಲ್ಲಿ ಗೂಡಿನ ವಹಿವಾಟು ನಡೆಯುತ್ತಿರುವ ಕಾರಣ ಪ್ರೋತ್ಸಾಹಕ ದರಗಳು ದೊರೆಯುತ್ತಿವೆ. ಆದ್ದರಿಂದ ಬೆಂಬಲ ಬೆಲೆ ನೀಡುವ ಕಾರ್ಯಕ್ರಮ ಇರುವುದಿಲ್ಲ. ಬೆಂಬಲ ಬೆಲೆ ಇಲ್ಲದೇ ರೈತರು ನಷ್ಟವನ್ನು ಅನುಭವಿಸುವತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಇ) ರಾಜ್ಯದ ರೇಷ್ಮೆ ಕೃಷಿ ಅಭಿವೃದ್ಧಿಗಾಗಿ ಸರ್ಕಾರವು ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ.

ಅ) ರಾಜ್ಯ ಸರ್ಕಾರ ಮತ್ತು ಕೇಂದ್ರ ರೇಷ್ಮೆ ಮಂಡಳಿಯ ಸಹಯೋಗದ ಕೆಟಲಿಟಿಕ್ ಅಭಿವೃದ್ಧಿ ಕಾರ್ಯಕ್ರಮಗಳು:

1) ಹೊಸ ಹಿಪ್ಪುನೇರಳೆ ಹಳೆ ಅಭಿವೃದ್ಧಿ – ಕಿಸಾನ್ ನರ್ಸರಿಗೆ ಪ್ರೋತ್ಸಾಹಧನ ರೂ.50000/– ಒಂದು ಲಕ್ಷ ಸಸಿಗಳಿಗೆ.

2) ಹಿಪ್ಪುನೇರಳೆ ತೋಟಗಳಿಗೆ ಹನಿ ನೀರಾವರಿ ಘಟಕ ಅಳವಡಿಕೆಗೆ ಸಹಾಯಧನ ರೂ.28800/– ಒಂದು ಹೆಕ್ಟೇರ್‌ಗೆ

3) ಪ್ರತ್ಯೇಕ ಹುಳು ಸಾಕುವ ಮನೆಗೆ ಸಹಾಯಧನ ರೂ.50000/– 1000 ಚ.ಅ., ರೂ.25000/– 600 ಚ.ಅ. ರೂ.15000/– 375 ಚ.ಅ. ಮನೆಗೆ.

4) ರೇಷ್ಮೆ ಹುಳು ಸಾಕುವ ಸಲಕರಣೆಗಳಿಗೆ ರೂ.30000/– ಸಹಾಯಧನ.

5. ರೋಗ ನಿಯಂತ್ರಣಕ್ಕಾಗಿ ಸೋಂಕು ನಿವಾರಕಗಳ ಸರಬರಾಜು

6) ರೇಷ್ಮೆ ಬೆಳೆಗಾರರಿಗೆ ತರಬೇತಿ ಮತ್ತು ಟೂಲ್‌ಕಿಟ್ ರೂ.2000/– ಸಹಾಯಧನ.

7) ಚಾಕಿ ಸಾಕಾಣಿಕೆ ಕಟ್ಟಡ/ಸಲಕರಣೆಗಳಿಗೆ ಸಹಾಯಧನ ರೂ.1.5 ಲಕ್ಷ

8) ಸ್ಥಳೀಯ ಭಾಷೆಗಳಲ್ಲಿ ದೃಶ್ಯ ಮತ್ತು ಪ್ರಚಾರ ಸಾಹಿತ್ಯ ಮುದ್ರಣ.

9) ವರ್ಮಿಕಾಂಪೋಸ್ಟ್ ಶೆಡ್ ನಿರ್ಮಾಣಕ್ಕೆ ರೂ.10,500/– ಗಳ ಸಹಾಯಧನ.

ಆ) ಇಲಾಖೆಯಿಂದ ನೀಡುತ್ತಿರುವ ಸೌಲಭ್ಯಗಳು:

ರೇಷ್ಮೆ ವರದಾನ ಯೋಜನೆ:

1) ಹಿಪ್ಪುನೇರಳೆ ನಾಟಿಗಾಗಿ ಪ್ರತಿ ಎಕರೆಗೆ ರೂ.5000/– ಸಹಾಯಧನ

2) 2ನೇ ಹೆಕ್ಟೇರ್ ಹಿಪ್ಪುನೇರಳೆ ತೋಟಕ್ಕೆ ಹನಿ ನೀರಾವರಿ ಪದ್ಧತಿ ಅಳವಡಿಕೆಗೆ ರೂ.28800/– ಸಹಾಯಧನ.

3) 2ನೇ ಪ್ರತ್ಯೇಕ ಹುಳು ಸಾಕುವ ಮನೆಗೆ ಸಹಾಯಧನ ರೂ.50000/– 1000 ಚ.ಅ, ರೂ.25000/– 600 ಚ.ಅ. ರೂ.15000/– 375 ಚ.ಅ. ಮನೆಗೆ.

4) ಹೆಣ್ಣು ಹುಳು ನಿರ್ವಹಣೆಗಾಗಿ ಮೌಂಟಿಂಗ್ ಹಾಲ್ ನಿರ್ಮಾಣಕ್ಕೆ ರೂ.50000/– ಸಹಾಯಧನ.

ಇತರ ಸೌಲಭ್ಯಗಳು:

1) ನೂತನ ತಾಂತ್ರಿಕತೆಗಳ ಅನುಸರಣೆಗಾಗಿ ತರಬೇತಿ ಮತ್ತು ಮಾರ್ಗದರ್ಶನ

2) ಉತ್ತಮ ಗುಣಮಟ್ಟದ ಮೊಟ್ಟೆಗಳ ಸರಬರಾಜು

3) ಬೆಳೆದ ಗೂಡುಗಳ ವಿಲೇವಾರಿಗಾಗಿ ಗೂಡು ಮಾರುಕಟ್ಟೆಗಳ ನಿರ್ವಹಣೆ

4) ರೇಷ್ಮೆ ವ್ಯವಸಾಯದ ಚಟುವಟಿಕೆಗಳಿಗಾಗಿ ಬ್ಯಾಂಕುಗಳಿಂದ ಸಾಲ ಸೌಲಭ್ಯ ಪಡೆಯಲು ಸಹಾಯ.

ಇದಲ್ಲದೆ ವಿಶೇಷ ಘಟಕ ಯೋಜನೆ / ಗಿರಿಜನ ಯೋಜನೆ / ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತ್ ಯೋಜನೆಗಳಡಿ ಹಿಪ್ಪುನೇರಳೆ ಬೆಳೆಯಲು ಪ್ರೋತ್ಸಾಹಧನ, ರೇಷ್ಮೆ ಹುಳು ಸಾಕುವ ಮನೆ ನಿರ್ಮಾಣಕ್ಕೆ ಸಹಾಯಧನ, ಮತ್ತು ರೇಷ್ಮೆ ಹುಳು ಸಾಕುವ ಸಲಕರಣೆಗಳ ಸರಬರಾಜು.

ಈ) 2006–07ನೇ ಸಾಲಿನ ಡಿಸೆಂಬರ್ 2006ರ ಅಂತ್ಯಕ್ಕೆ ಮಾರುಕಟ್ಟೆ ಹಾಗೂ ಇತರೆ ಶುಲ್ಕಗಳಿಂದ ಒಟ್ಟು ರೂ.1809 ಲಕ್ಷಗಳು ಸರ್ಕಾರದ ಬೊಕ್ಕಸಕ್ಕೆ ಜಮೆಯಾಗಿದೆ. ಸರ್ಕಾರದಿಂದ ರೇಷ್ಮೆ ಗೂಡಿಗೆ ಬೆಂಬಲ ಬೆಲೆ ನೀಡುವ ಕಾರ್ಯಕ್ರಮ ಇರುವುದಿಲ್ಲ.

ಉ) ರೇಷ್ಮೆ ಬೆಳೆಯು ಸಂಕಷ್ಟದಲ್ಲಿರುವುದಿಲ್ಲ.

ಮೇಲಿನ 'ಇ' ನಲ್ಲಿ ತಿಳಿಸಿರುವ ಪ್ರೋತ್ಸಾಹದಾಯಕ ಕಾರ್ಯಕ್ರಮಗಳಿಂದಾಗಿ ಮಾರ್ಚ್ 2006ರ ಅಂತ್ಯದಲ್ಲಿದ್ದಂತಹ 87734 ಹೆಕ್ಟೇರ್ ಹಿಪ್ಪುನೇರಳೆ ವಿಸ್ತೀರ್ಣವು ಡಿಸೆಂಬರ್ 2006 ಅಂತ್ಯಕ್ಕೆ 99131 ಹೆಕ್ಟೇರ್‌ಗಳಿಗೆ ಏರಿದೆ.

266 (786) – ಶ್ರೀ ಶಿವಶಂಕರ್‌ರೆಡ್ಡಿ ಎನ್.ಹೆಚ್. (ಗೌರಿಬಿದನೂರು) – ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆ, ಗೌರಿಬಿದನೂರು ತಾಲ್ಲೂಕಿನಲ್ಲಿರುವ ಸಣ್ಣ ನೀರಾವರಿ ಇಲಾಖಾ ವ್ಯಾಪ್ತಿಗೆ ಬರುವ ಕೆರೆಗಳ ಸಂಖ್ಯೆ ಎಷ್ಟು (ವಿವರ ಒದಗಿಸುವುದು) ;

ಆ) ಸಣ್ಣ ನೀರಾವರಿ ಇಲಾಖಾ ವ್ಯಾಪ್ತಿಯಲ್ಲಿರುವ ಕೆರೆಗಳಲ್ಲಿ ಅಧಿಕ ಪ್ರಮಾಣದಲ್ಲಿ ಹೂಳು ತುಂಬಿರುವುದರಿಂದ ಮಳೆ ನೀರು ಅಧಿಕ ಪ್ರಮಾಣದಲ್ಲಿ ಸಂಗ್ರಹವಾಗದೇ ಪೋಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;